5826

1819

ದಸ್ತಾವೇಜಿನ ........ ನೇ ಪುಟ
ಉಪ ನೋಂದಣಾಧಿಕಾರಿಗಳು
ಹೊಸಪೇಟೆ.

## : ಭೂ ಪರಿವರ್ತನೆಯಾದ ಜಮೀನಿನ ಶುದ್ಧ ಕ್ರಯ ಪತ್ರ ರೂ.40,00,000–00 :

ಎರಡು ಸಾವಿರದ ಹದಿನಾರನೇ ಇಸವಿ, ಜನವರಿ ಮಾಹೆ, ತಾರೀಖು ಹದಿನೆಂಟರಲ್ಲು (18–01–2016), ಬೆಂಗಳೂರು ಸಿಟಿ, ಆರ್.ಟಿ. ನಗರ ಮೇನ್ ರೋಡು, ಆರ್.ಟಿ. ನಗರ ಪೊಲೀಸ್ ಠಾಣೆ ಎದುರು, ಡೋರ್ ನಂಬರ್ 372, DHRUVDESH VENTURES ಎಂಬ ಪಾಲುದಾರಿಕೆಯ ಸಂಸ್ಥೆಯ ಪರವಾಗಿ ವಿಶೇಷ ಅಧಿಕಾರ ಪಡೆದು ಪ್ರತಿನಿಧಿಸುವ **ಶ್ರೀ ವೆಂಕಟೇಶ್ ಶ್ರೀನಿವಾಸ್ ಕಾಮತ್** (EPIC No. D.L. No. 02-19861000916) ಇವರಿಗೆ :–

ದಾವಣಗೆರೆ ಸಿಟಿ, ಎಂ.ಸಿ.ಸಿ. "ಬಿ" ಬ್ಲಾಕ್, 5ನೇ ಮೇನ್, 6ನೇ ಕ್ರಾಸ್, ಮನೆ ನಂಬರ್ 3562 ರಲ್ಲಿ ವಾಸವಾಗಿರುವ **ಶ್ರೀ ಜೆ.ಕೆ.ಕೊಟ್ರಪ್ಪ ಬಿನ್ ಲೇಟ್ ಜೆ.ಕೊಟ್ರಪ್ಪ** (D.L.No. KA 17 1981100200) ಇವರು ಒಪ್ಪಿ ಬರೆಯಿಸಿಕೊಟ್ಟ ಸ್ಥಿರ ಸೊತ್ತು ಭೂ ಪರಿವರ್ತನೆಯಾದ ಜಮೀನಿನ ಶುದ್ಧ ಕ್ರಯ ಪತ್ರ ಏನೆಂದರೆ :–

ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಜಮೀನು ಮೂಲ ಮಾಲೀಕರಾದ ಶ್ರೀ ಲಂಬಾಡಿ ಶಂಕ್ರನಾಯ್ಕ ಬಿನ್ ಲಂಬಾಡಿ ತೀಡ್ಯಾನಾಯ್ಕ ಇವರಿಗೆ ತಹಶೀಲ್ದಾರ್‌ರವರು, ಹೊಸಪೇಟೆ, ಇವರಿಂದ ಡಿ.ಆರ್.ನಂ.945ರ ಗ್ರಾಂಟ್ ಸರ್ಟಿಫಿಕೇಟ್ ಸಾಗುವಳಿ ಚೀಟಿ ಮೂಲಕ ಮಂಜೂರಾಗಿರುತ್ತದೆ. ತದ ನಂತರ ಶ್ರೀ ಲಂಬಾಡಿ ಶಂಕ್ರನಾಯ್ಕ ಬಿನ್ ಲಂಬಾಡಿ ತೀಡ್ಯಾನಾಯ್ಕ ಇವರು ತಮ್ಮ ಹೆಸರಿಗೆ ಇರತಕ್ಕ ಷೆಡ್ಯೂಲ್ ಸೊತ್ತನ್ನು ಸದರಿಯವರ ಮಗನಾದ ಸೋಮ್ಲನಾಯ್ಕ ಇವರಿಗೆ ವ್ಯವಸ್ಥಾ ಪತ್ರದ ಮೂಲಕ ಹಸ್ತಾಂತರ ಮಾಡಿದ್ದು, ಈ ಬಗ್ಗೆ ಸದರಿ ಪತ್ರವು ಹೊಸಪೇಟೆ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ದಿನಾಂಕ: 19–08–1969 ರಂದು ಬುಕ್ ನಂ.01, ವಾಲ್ಯೂ ನಂಬರ್ 508, ಪುಟಗಳು 85–86ರ ಪುಟಗಳಲ್ಲಿ ರಿ.ನಂ.1990/69–70ನೇ ನಂಬರಾಗಿ ನೋಂದಣಿಯಾಗಿರುತ್ತದೆ.

ಸಿ.ವಿ.ನಂ.ಈ ನಕಲಿನಲ್ಲಿ 10 ಪುಟಗಳಿದ್ದು ಇದು 2 ನೇ ಪುಟ

1819 / 20-21

ಈ ದಸ್ತಾವೇಜಿನಲ್ಲಿ 16 ಪುಟಗಳು ಇದ್ದು 5826/15-16
ದಸ್ತಾವೇಜಿನ 2 ನೇ ಪುಟ
ಉಪ ನೋಂದಣಾಧಿಕಾರಿಗಳು
ಹೊಸಪೇಟೆ.

ಕರ್ನಾಟಕ ಸರ್ಕಾರ

**ನೋಂದಣಿ ಹಾಗೂ ಮುದ್ರಾಂಕ ಇಲಾಖೆ**

**Department of Stamps and Registration**

**ಪ್ರಮಾಣ ಪತ್ರ**

**1957 ರ ಕರ್ನಾಟಕ ಮುದ್ರಾಂಕ ಕಾಯ್ದೆಯ ಕಲಂ 10 ಎ ಅಡಿಯಲ್ಲಿಯ ಪ್ರಮಾಣ ಪತ್ರ**

ಶ್ರೀ ದೃವದೇಶ್ ವೆಂಛರ್ಸ್ ಎಂ. ಪಾಲುದಾರಿಕೆಯ ಸಂಸ್ಥೆಯ ಪರವಾಗಿ ವಿಶೇಷ ಅಧಿಕಾರ ಪಡೆದ ವೆಂಕಟೇಶ್ ಶ್ರೀನಿವಾಸ್ ಕಾಮತ್ , ಇವರು 246140.00 ರೂಪಾಯಿಗಳನ್ನು ನಿಗದಿತ ಮುದ್ರಾಂಕ ಶುಲ್ಕವಾಗಿ ಪಾವತಿಸಿರುವದನ್ನು ದೃಡಿಕರಿಸಲಾಗಿದೆ

| ಪ್ರಕಾರ | ಮೊತ್ತ (ರೂ.) | ಹಣದ ಪಾವತಿಯ ವಿವರ |
|---|---|---|
| ~~ನಗದು ರೂಪ~~ | ~~20000.00~~ | ~~ಸಿಸ್ಟಂಗಾಗಿ~~ |
| ಇತರ ಬ್ಯಾಂಕ್ ಡಿ.ಡಿ. | 226140.00 | HDFC Bank Hospet, DD No. 008958, Date: 16-01-2016 |
| ಒಟ್ಟು : | 246140.00 | |

ಸ್ಥಳ : ಹೊಸಪೇಟೆ


ದಿನಾಂಕ : 18/01/2016

ಉಪ ನೋಂದಣಾಧಿಕಾರಿಗಳು
ಹೊಸಪೇಟೆ.

Designed and Developed by C- DAC ,ACTS Pune.

ಸಿ.ಎ.ನಂ.ಈ ನಕಲಿನಲ್ಲಿ 10 ಪುಟಗಳಿದ್ದು ಇದು 3ನೇ ಪುಟ

1819
20-21





ಉಪ ನೋಂದಣಾಧಿಕಾರಿಗಳು

ನಂತರ ಷೆಡ್ಯೂಲ್ ಜಮೀನು ತಹಶೀಲ್ದಾರ್‌ರವರ ಕಛೇರಿಯಲ್ಲಿ ಮುಟೇಷನ್ ರಿಜಿಸ್ಟರ್ ನಂ.ಎಂ.180/83-84, ಎಂ.28/89-90, ಖಾತೆ ನಂ.1265ರ ಪ್ರಕಾರ ಸದರಿ ಶ್ರೀ ಲಂಬಾಡಿ ಸೋಮ್ಲಾನಾಯ್ಕ ಮತ್ತು ಇವರ ಮಗನಾದ ಲಂಬಾಡಿ ಕೃಷ್ಣನಾಯ್ಕ ಇವರುಗಳ ಜಂಟಿ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. ತದ ನಂತರ ಶ್ರೀ ಸೋಮ್ಲನಾಯ್ಕ ಇವರು ಈ ಹಿಂದೆ ದಿನಾಂಕ: 2-7-2012 ರಂದು ಮರಣ ಹೊಂದಿರುತ್ತಾರೆ. ಸದರಿಯವರ ತರುವಾಯ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತಿಗೆ ದಿವಂಗತ ಲಂಬಾಡಿ ಸೋಮ್ಲನಾಯ್ಕ ಇವರ ಧರ್ಮಪತ್ನಿ ಶ್ರೀಮತಿ ಸೇವಲವ್ವ ಯಾನೇ ದೇವಲವ್ವ ಮತ್ತು ಇವರ ಮಕ್ಕಳಾದ (1) ಕೃಷ್ಣನಾಯ್ಕ (2) ನಾರಾಯಣನಾಯ್ಕ (3) ಯಮುನಾನಾಯ್ಕ, (4) ಶಂಕ್ರನಾಯ್ಕ ಇವರುಗಳು ಕಾನೂನು ಬದ್ಧ ವಾರಸುದಾರರಾಗಿರುತ್ತಾರೆ. ಮತ್ತು ಶ್ರೀಮತಿ ನೀಲಾಬಾಯಿ ಮತ್ತು ಸಾರುಬಾಯಿ ಇವರುಗಳು ಹೆಣ್ಣು ಮಕ್ಕಳುಗಳಿದ್ದು, ಇವರುಗಳು ಸಹ ಈ ಹಿಂದೆ ನೋಂದಣಿಯಾಗಿರುವ ಪತ್ರಕ್ಕೆ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ಮತ್ತು ಸದರಿ ಸೊತ್ತನ್ನು ಪರಭಾರೆ ವಗೈರೆ ಮಾಡಿದ ಬಗ್ಗೆ ಅವರುಗಳ ಯಾವುದೇ ತಂಟೆ, ತಕರಾರು, ವಗೈರೆ ಸಹ ಇರುವುದಿಲ್ಲ. ಸದರಿ ದಿವಂಗತ ಸೋಮ್ಲನಾಯ್ಕ ಇವರ ಮರಣ ನಂತರ ಶ್ರೀಮತಿ ಸೇವಲವ್ವ ಯಾನೇ ದೇವಲವ್ವ ಮತ್ತು ಲಂಬಾಣಿ ಕೃಷ್ಣನಾಯ್ಕ ಇವರುಗಳ ಜಂಟಿ ಹೆಸರಿಗೆ ತಹಶೀಲ್ದಾರ್‌ರವರ ಕಛೇರಿಯಲ್ಲಿ ಎಂ.ಆರ್.ಹೆಚ್.74/2012-13, ಫೌತಿ, ದಿನಾಂಕ: 11-01-2013, ಖಾತೆ ನಂ.1263ರ ಪ್ರಕಾರ ಷೆಡ್ಯೂಲ್ ಜಮೀನಿನ ಖಾತೆ ವರ್ಗಾವಣೆಯಾಗಿರುತ್ತದೆ.

ಆ ಲಾಗಾಯ್ತು ಸದರಿ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನಿಗೆ ದಿವಂಗತ ಲಂಬಾಡಿ ಸೋಮ್ಲನಾಯ್ಕ ಇವರ ಧರ್ಮಪತ್ನಿ ಶ್ರೀಮತಿ ಸೇವಲವ್ವ ಯಾನೇ ದೇವಲವ್ವ ಮತ್ತು ಇವರ ಮಕ್ಕಳಾದ (1) ಕೃಷ್ಣನಾಯ್ಕ (2) ನಾರಾಯಣನಾಯ್ಕ (3) ಯಮುನಾನಾಯ್ಕ, (4) ಶಂಕ್ರನಾಯ್ಕ ಇವರುಗಳೇ ಸಂಪೂರ್ಣ ಮಾಲೀಕರು, ಹಕ್ಕುದಾರು ಹಾಗೂ ಸ್ವಾಧೀನದಾರರು ಸಹ ಆಗಿರುತ್ತಾರೆ.

ಸಿ.ವಿ.ಸಂ.ಈ ನಕಲಿನಲ್ಲಿ 10 ಪುಟಗಳಿದ್ದು ಇದು 4 ನೇ ಪುಟ

1819
20-21

ಈ ದಸ್ತಾವೇಜಿನಲ್ಲಿ 10 ಪುಟಗಳು ಇವೆ
5826/15-16
ದಸ್ತಾವೇಜಿನ 4 ನೇ ಪುಟ
ಉಪ ನೋಂದಣಾಧಿಕಾರಿಗಳು
ಹೊಸಪೇಟೆ.

Print Date & Time : 18-01-2016 11:51:13 AM

ದಸ್ತಾವೇಜು ಸಂಖ್ಯೆ : 5826

ಸಬ್ ರಜಿಸ್ಟ್ರಾರ ಹೊಸಪೇಟೆ ರವರ ಕಚೇರಿಯಲ್ಲಿ ದಿನಾಂಕ 18-01-2016 ರಂದು 11:38:57 AM ಗಂಟೆಗೆ ಈ ಕೆಳಗೆ ವಿವರಿಸಿದ ಶುಲ್ಕದೊಂದಿಗೆ

| ಕ್ರಮ ಸಂಖ್ಯೆ | ವಿವರ | ರೂ. ಪೈ |
|---|---|---|
| 1 | ನೋಂದಣಿ ಶುಲ್ಕ | 40000.00 |
| 2 | ಸ್ಕ್ಯಾನಿಂಗ್ ಫೀ | 385.00 |
| 3 | ಪರಿವರ್ತನಾ ಶುಲ್ಕ | 70.00 |
| 4 | ಪರಿಶೋಧನಾ ಶುಲ್ಕ | 30.00 |
| | ಒಟ್ಟು : | 40485.00 |

ಶ್ರೀ ದ್ಯವದೇಶ್ ವೆಂಛರ್ಸ್ ಎಂ. ಪಾಲುದಾರಿಕೆಯ ಸಂಸ್ಥೆಯ ಪರವಾಗಿ ವಿಶೇಷ ಅಧಿಕಾರ ಪಡೆದ ವೆಂಕಟೇಶ್ ಶ್ರೀನಿವಾಸ್ ಕಾಮತ್ ಇವರಿಂದ ಹಾಜರ ಮಾಡಲ್ಪಟ್ಟಿದೆ

| ಹೆಸರು | ಫೋಟೋ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|
| ಶ್ರೀ ದ್ಯವದೇಶ್ ವೆಂಛರ್ಸ್ ಎಂ. ಪಾಲುದಾರಿಕೆಯ ಸಂಸ್ಥೆಯ ಪರವಾಗಿ ವಿಶೇಷ ಅಧಿಕಾರ ಪಡೆದ ವೆಂಕಟೇಶ್ ಶ್ರೀನಿವಾಸ್ ಕಾಮತ್ |  |  | V.S |

ಸಬ್ ರಜಿಸ್ಟ್ರಾರ
ಉಪ ನೋಂದಣಾಧಿಕಾರಿಗಳು
ಹೊಸಪೇಟೆ.


ಬರೆದುಕೊಟ್ಟಿದ್ದಾಗಿ ಒಪ್ಪಿರುತ್ತಾರೆ

| ಕ್ರಮ ಸಂಖ್ಯೆ | ಹೆಸರು | ಫೋಟೋ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|---|
| 1 | ದ್ಯವದೇಶ್ ವೆಂಛರ್ಸ್ ಎಂಬ ಪಾಲುದಾರಿಕೆಯ ಸಂಸ್ಥೆಯ ಪರವಾಗಿ ವಿಶೇಷ ಅಧಿಕಾರ ಪಡೆದ ವೆಂಕಟೇಶ್ ಶ್ರೀನಿವಾಸ್ ಕಾಮತ್ . (ಬರೆಸಿಕೊಂಡವರು) |  |  | V.S |
| 2 | ಜಿ.ಕೆ. ಕೊಟ್ರಪ್ಪ ಬಿನ್ ಲೇಟ್ ಜೆ. ಕೊಟ್ರಪ್ಪ (ಬರೆದುಕೊಡುವವರು) |  |  | |

ಸಬ್ ರಜಿಸ್ಟ್ರಾರ
ಉಪ ನೋಂದಣಾಧಿಕಾರಿಗಳು
ಹೊಸಪೇಟೆ.

ಸಿ.ವಿ.ಸಂ.ಈ ನಕಲಿನಲ್ಲಿ 10 ಪುಟಗಳಿದ್ದು ಇದು 5 ನೇ ಪುಟ

1819
20-21



ಉಪ ನೋಂದಣಾಧಿಕಾರಿಗಳು
ಹೊಸಪೇಟೆ.




ಸದರಿ ಮೇಲ್ಕಂಡ ಪೂರಾ ಜಮೀನು ದರಖಾಸ್ತು ಜಮೀನಾಗಿರುವುದರಿಂದ ಷೆಡ್ಯೂಲ್ ಜಮೀನನ್ನು ಮಾರಾಟ ಮಾಡಲು ಮೂಲ ಮಾಲೀಕರು ಈ ಹಿಂದೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು, ನಂತರ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಇವರಿಂದ ದಿನಾಂಕ: 10-02-2010 ರಂದು ಸಂಖ್ಯೆ.ಆರ್‌ಡಿ47 ಎಲ್‌ಜಿಇ2009ರ ಪ್ರಕಾರ ಮತ್ತು ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರ ನಡವಳಿಕೆಗಳ ಆದೇಶದ ಸಂಖ್ಯೆ.ಕಂ/ಭೂಮಿ/ಪಿಟಿಸಿಎಲ್/04/2009-10, ದಿನಾಂಕ: 31-1-2013ರ ಪ್ರಕಾರ ಷೆಡ್ಯೂಲ್ ಜಮೀನನ್ನು ಮಾರಾಟ ಮಾಡಲು ಅನುಮತಿಯನ್ನು ಸಹ ಪಡೆದುಕೊಂಡಿರುತ್ತಾರೆ.

ಈ ಹಿಂದೆ ತಾರೀಖು : 30-07-2013 ರಂದು ಹೊಸಪೇಟೆ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಬುಕ್ ನಂ.01, ಸಿ.ಡಿ.ನಂ.ಹೆಚ್‌ಎಸ್‌ಪಿಡಿ-83 ರಲ್ಲಿ, ರಿ.ನಂ.ಹೆಚ್‌ಎಸ್‌ಪಿ-1-02758/2013-14ನೇ ನಂಬರಾಗಿ ನನ್ನ ಹೆಸರಿಗೆ ರಿಜಿಸ್ಟ್ರಾದ ಶುದ್ಧ ಕ್ರಯಪತ್ರದ ಮೂಲಕ ನಾನು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಕಮಲಾಪುರ ಹೋಬಳಿ, ಕಮಲಾಪುರ ಗ್ರಾಮದ ರೀ ಸರ್ವೆ ನಂಬರ್ 901, ವಿಸ್ತೀರ್ಣ: ಎಕರೆ-10, ಸೆಂಟ್ಸ್-54 (10-54), ಆಕಾರ ರೂ.4-75 ಪೈಸೆವುಳ್ಳ ಪೂರಾ ಜಮೀನನ್ನು ಸ್ವಯಾರ್ಜಿತವಾಗಿ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಕಮಲಾಪುರ ಗ್ರಾಮದ ಕೆರೆ ತಾಂಡದಲ್ಲಿ ವಾಸವಾಗಿರುವ ದಿವಂಗತ ಲಂಬಾಡಿ ಸೋಮ್ಲನಾಯ್ಕ ಇವರ ಧರ್ಮಪತ್ನಿ ಶ್ರೀಮತಿ ಸೇವಲವ್ವ ಯಾನೇ ದೇವಲವ್ವ ಮತ್ತು ಇವರ ಮಕ್ಕಳಾದ (1) ಕೃಷ್ಣನಾಯ್ಕ (2) ನಾರಾಯಣನಾಯ್ಕ (3) ಯಮುನಾನಾಯ್ಕ, (4) ಶಂಕ್ರನಾಯ್ಕ ಇವರುಗಳಿಂದ ಕ್ರಯಕ್ಕೆ ಪಡೆದುಕೊಂಡಿದ್ದು, ಆ ಲಾಗಾಯ್ತು ಸದರಿ ಜಮೀನು ನನ್ನ ಹೆಸರಿಗೆ ಖಾತೆ ವರ್ಗಾವಣೆಯಾಗಿ, ನನ್ನ ಸಂಪೂರ್ಣ ಹಕ್ಕುದಾರಿ ಹಾಗೂ ಸ್ವಾಧೀನಾನುಭವಕ್ಕೆ ಸೇರಿರುವ ಸೊತ್ತಾಗಿರುತ್ತದೆ.

ಸದರಿ ಮೇಲ್ಕಂಡ ಪೂರಾ ಜಮೀನನ್ನು ನಾನು ಮಾರಾಟ ಮಾಡಲು ಈ ಹಿಂದೆ ದಿನಾಂಕ: 30-07-2013 ರಂದು ಹೊಸಪೇಟೆ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಬುಕ್ ನಂಬರ್ 01, ಸಿ.ಡಿ.ನಂಬರ್ ಹೆಚ್‌ಎಸ್‌ಪಿಡಿ-83, ರಿ.ನಂ.ಹೆಚ್‌ಎಸ್‌ಪಿ -1-2761/2013-14ನೇ ನಂಬರಾಗಿ ಒಂದು ಕ್ರಯದ ಕರಾರು ಪತ್ರವನ್ನು ಸಹ ನಿಮಗೆ ಮಾಡಿಕೊಟ್ಟಿರುತ್ತೇನೆ.

1819
20.21



ಉಪ ... ಅಧಿಕಾರಿಗಳು
ಹೊಸಪೇಟೆ.




ಸದರಿ ನಾನು ಮೇಲ್ಕಂಡಂತೆ ಕ್ರಯಕ್ಕೆ ಪಡೆದುಕೊಂಡಿರುವ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಕಮಲಾಪುರ ಹೋಬಳಿ, ಕಮಲಾಪುರ ಗ್ರಾಮದ ರೀ ಸರ್ವೆ ನಂಬರ್ 901, ವಿಸ್ತೀರ್ಣ: ಎಕರೆ–10, ಸೆಂಟ್ಸ್–54 (10–54) ವುಳ್ಳ ಜಮೀನಿನ ಪೈಕಿ ವಿಸ್ತೀರ್ಣ: ಎಕರೆ–ಏಳು, ಸೆಂಟ್ಸ್–ಐವ್ವತ್ತು (7–50) ವುಳ್ಳ ಪೂರಾ ಜಮೀನನ್ನು ನಾನು ಕೃಷಿಯೇತರ ವಾಣಿಜ್ಯ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರ ಆದೇಶದ ಸಂಖ್ಯೆ.ಕಂ/ಭೂಪ.361/2014–15, ದಿನಾಂಕ: 26–08–2015 ರ ಆರ್ಡರ್ ಪ್ರಕಾರ ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ. ಈ ರೀತಿ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವ ಪೂರಾ ಜಮೀನು ಹಾಲಿ ನನ್ನ ಹೆಸರಿನಲ್ಲಿ ಇದ್ದು, ನನ್ನ ಹಕ್ಕುದಾರಿ ಹಾಗೂ ಸ್ವಾಧೀನಾನುಭವದಲ್ಲಿರುವ ಸೊತ್ತಾಗಿರುತ್ತದೆ. ಮತ್ತು ಸದರಿ ಷೆಡ್ಯೂಲ್ ಸೊತ್ತಿಗೆ ನಾನೇ ಸಂಪೂರ್ಣ ಮಾಲೀಕನು, ಹಕ್ಕುದಾರನು ಹಾಗೂ ಸ್ವಾಧೀನದಾರನು ಸಹ ಆಗಿರುತ್ತೇನೆ. ಸದರಿ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತನ್ನು ಅಭಿವೃದ್ಧಿಪಡಿಸಲು ನನಗೆ ಹಣದ ಅನಾನೂಕೂಲತೆ ಇರುವುದರಿಂದಲೂ ಮತ್ತು ಹಾಲಿ ನಾನು ದಾವಣಗೆರೆ ನಗರದಲ್ಲಿ ವಾಸವಾಗಿರುವುದರಿಂದಲೂ ಮತ್ತು ಸದರಿ ಜಮೀನಿಗೆ ಈಗಿನ ಕಾಲಕ್ಕೆ ಯೋಗ್ಯವಾದ ಮಾರುಕಟ್ಟೆ ಬೆಲೆ ಬಂದಿದ್ದರಿಂದಲೂ ಮಾರಾಟ ಮಾಡುವುದೇ ಸೂಕ್ತವೆಂದು ತಿಳಿದು ಮತ್ತು ಮಾರಾಟದಿಂದ ಬಂದ ಹಣದಿಂದ ಬೇರೊಂದು ಸೂಕ್ತ ಆಸ್ತಿಯನ್ನು ಖರೀದಿಸುವುದಕ್ಕೋಸ್ಕರ ನಿಮಗೆ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಜಮೀನನ್ನು ಈಗಿನ ಮಾರ್ಕೆಟ್ ಬೆಲೆಗೆ ಸರಿಯಾಗಿ **ರೂ.40,00,000–00 (ನಲವತ್ತು ಲಕ್ಷ ರೂಪಾಯಿ)** ಗಳಿಗೆ ಶುದ್ಧ ಕ್ರಯಕ್ಕೆ ಕೊಟ್ಟು, ಕ್ರಯದ ಬಾಬ್ತು ಪೂರಾ ಮೊಬಲಗನ್ನು ನಾನು ನಿಮ್ಮಿಂದ ಈ ಕೆಳಕಂಡ ತಪಶೀಲುಗಳ ಪ್ರಕಾರ ಪಡೆದುಕೊಂಡಿರುತ್ತೇನೆ

1) ಬೆಂಗಳೂರು ಸಿಟಿ, ಆರ್.ಟಿ.ನಗರ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಇವರ ಡಿ.ಡಿ. ನಂಬರ್ 2882 ದಿನಾಂಕ: 24-7-2013 ರ ಮೂಲಕ **ರೂ.30,00,000–00 (ಮೂವ್ವತ್ತು ಲಕ್ಷ ರೂಪಾಯಿ)** ಗಳನ್ನು ಈ ಹಿಂದೆ ನಿಮ್ಮಿಂದ ಮುಂಗಡವಾಗಿ ದಿನಾಂಕ: 30–07–2013 ರಂದು ಕರಾರು ಪತ್ರದ ಮೂಲಕ ಪಡೆದುಕೊಂಡಿರುತ್ತೇನೆ.

ಸಿ.ಎಸ್.ನಂ.ಈ ನಕಲಿನಲ್ಲಿ 10 ಪುಟಗಳಿದ್ದು ಇದು 7ನೇ ಪುಟ

1819/20-21






ಉಪ ನೋಂದಣಾಧಿಕಾರಿಗಳು
ಹೊಸಪೇಟೆ.

2) ಬೆಂಗಳೂರು ಸಿಟಿ, ಆರ್.ಟಿ.ನಗರ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಇವರ ಡಿ.ಡಿ. ನಂಬರ್ **008952**, ದಿನಾಂಕ: **14-01-2016** ರ ಮೂಲಕ **ರೂ.10,00,000-00 (ಹತ್ತು ಲಕ್ಷ ರೂಪಾಯಿ)** ಗಳನ್ನು ನಿಮ್ಮಿಂದ ಈ ದಿವಸ ಈ ಕೆಳಗೆ ಕಂಡ ಸಾಕ್ಷಿಗಳ ಸಮಕ್ಷಮ ಪಡೆದುಕೊಂಡಿರುತ್ತೇನೆ.

ಈ ರೀತಿ ಸದರಿ ಕ್ರಯದ ಪೂರಾ ಮೊಬಲಗು ನಿಮ್ಮಿಂದ ನನಗೆ ಸಂದಾಯವಾಗಿರುತ್ತದೆ. ಹಾಗೂ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತನ್ನು ಸರ್ವ ಮಾಲೀಕತ್ವದೊಡನೆ ಹಾಗೂ ನನಗಿರತಕ್ಕ ವಿಶಿಷ್ಟ ಹಕ್ಕುಗಳೊಂದಿಗೆ ಈ ದಿನವೇ ನಿಮ್ಮ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುತ್ತೇನೆ. ಈ ಲಾಗಾಯ್ತು ಸದರಿ ಸೊತ್ತಿನಲ್ಲಿ ನನಗಾಗಲೀ ನಮ್ಮ ಇತರೆ ವಾರಸುದಾರರು ಗಳಿಗಾಗಲೀ ಅಥವಾ ನನ್ನ ವಂಶಸ್ಥರಿಗಾಗಲೀ ಏನೊಂದು ತರಹದ ಹಕ್ಕು ಬಾಧ್ಯತೆಗಳು ಇರುವುದಿಲ್ಲ. ಷೆಡ್ಯೂಲ್ ಸೊತ್ತನ್ನು ನಾನು ಈ ಹಿಂದೆ ಬೇರೆ ಯಾರಿಗೂ ಯಾವ ವಿಧದಿಂದಲೂ ಪರಭಾರೆ, ಕ್ರಯದ ಕರಾರು, ಅಡವು, ದಾನ, ಭೋಗ್ಯ ವಗೈರೆ ಯಾವುದನ್ನೂ ಮಾಡಿಕೊಟ್ಟಿರುವುದಿಲ್ಲ. ಸದರಿ ಸೊತ್ತು ಯಾರ ಜೀವನಾಂಶದ ಹಕ್ಕಿಗಾಗಲೀ, ಭಾಗಾಂಶದ ಹಕ್ಕಿಗಾಗಲೀ, ಮೈನರ್ ಹಕ್ಕು ವಗೈರೆಗಳಿಗೆ, ಸಿವಿಲ್, ರೆವಿನ್ಯೂ, ಕ್ರಿಮಿನಲ್ ವಗೈರೆಗಳಿಗೆ ಯಾವ ವಿಧವಾದ ಕೋರ್ಟ್‌ಗಳ ಅಟ್ಯಾಚ್‌ಮೆಂಟ್, ಡಿಕ್ರಿ, ಜಪ್ತಿ, ಜಾಮೀನು, ವಗೈರೆ ತಂಟೆ ತಕರಾರುಗಳಿಗೆ ಒಳಪಟ್ಟಿರುವುದಿಲ್ಲ. ಮತ್ತು ಯಾವುದೇ ಸಾಲ ಮೂಲಗಳಿಗೂ ಸಹ ಈಡಾಗಿರುವುದಿಲ್ಲ. ಮತ್ತು ಸದರಿ ಷೆಡ್ಯೂಲ್ ಜಮೀನು ಯಾವುದೇ ರೀತಿಯ ಋಣಭಾರಗಳಿಗೂ ಒಳಪಡದೇ ನಿರಾಪಾದಿಕ ಸೊತ್ತಾಗಿರುತ್ತದೆ. ಈ ಪೂರ್ವದಲ್ಲಿ ಈ ಕೆಳಕಂಡ ಷೆಡ್ಯೂಲ್ ಸೊತ್ತಿನ ಶುದ್ಧ ಕ್ರಯದ ವಿಚಾರವಾಗಿ ನಾನು ಬೇರೆ ಯಾರೊಂದಿಗೂ ಯಾವ ರೀತಿಯ ಒಪ್ಪಂದವನ್ನೂ ಸಹ ಮಾಡಿಕೊಂಡಿಲ್ಲವೆಂತಲೂ ನಿಮಗೆ ಸಂಪೂರ್ಣ ಭರವಸೆ ಹೇಳಿರುತ್ತೇನೆ ಸದರಿ ಸೊತ್ತಿನ ಹಕ್ಕು ಬಾಧ್ಯತೆಗಳ ವಿಚಾರದಲ್ಲಿ ಮುಂದೆ ಯಾವ ತಂಟೆ ತಕರಾರುಗಳು ಬಂದಾಗ್ಯೂ ಅವುಗಳನ್ನು ನಾನೇ ನನ್ನ ಸ್ವಂತ ಖರ್ಚಿನಿಂದ ಹಾಗೂ ಖುದ್ದು ಜವಾಬ್ದಾರಿಯಿಂದ ಪರಿಹರಿಸಿಕೊಡುತ್ತೇನೆ. ಇಲ್ಲಿಂದ ಮುಂದೆ ಸದರಿ ಷೆಡ್ಯೂಲ್ ಸೊತ್ತಿನಲ್ಲಿ ಲಭಿಸಬಹುದಾದ ಜಲ, ತರು, ನಿಧಿ, ನಿಕ್ಷೇಪ, ಪಾಷಾಣಾಧಿ ಅಷ್ಟಭೋಗ, ತೇಜ, ಸೌಮ್ಯಂಗಳಿಗೂ ಮೇಲ್ಕಂಡ ನೀವೇ ಭಾಗ್ಯದಾರರಾಗಿ ಅನುಭವಿಸಿಕೊಂಡು ಹೋಗಬಹುದು.

ಸಿ.ಎ.ಸಂ.ಈ ನಕಲಿನಲ್ಲಿ 10 ಪುಟಗಳಿದ್ದು ಇದು 8ನೇ ಪುಟ

1819
20-21





ಉಪ ನೋಂದಣಾಧಿಕಾರಿಗಳು
ಹೊಸಪೇಟೆ.


ಈ ಬಗ್ಗೆ ನನ್ನ ಸಂಪೂರ್ಣ ಒಪ್ಪಿಗೆ ಇರುತ್ತದೆ. ಸದರಿ ಷೆಡ್ಯೂಲ್ ಜಮೀನಿನ ಖಾತೆಯನ್ನು ನೀವು ಈ ಕ್ರಯಪತ್ರದ ದಾಖಲೆಯಿಂದ ಸಂಬಂಧಪಟ್ಟ ಇಲಾಖೆಗಳಲ್ಲಿ ನಿಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ನನ್ನ ಸಂಪೂರ್ಣ ಒಪ್ಪಿಗೆ ಇರುತ್ತದೆ. ದಾಖಲೆಯ ಬಗ್ಗೆ ನನ್ನಲ್ಲಿರುವ ಹಿಂದಿನ ಎಲ್ಲಾ ವಿಶಿಷ್ಟ ದಾಖಲಾತಿಗಳನ್ನು ಈ ದಿನವೇ ನಿಮ್ಮ ವಶಕ್ಕೆ ಕೊಟ್ಟಿರುತ್ತೇನೆ. ಹೀಗೆಂದು ನಾನು ನನ್ನ ಆತ್ಮ ಸಂತೋಷದಿಂದ ಒಪ್ಪಿ ಬರೆಯಿಸಿಕೊಟ್ಟ ಸ್ಥಿರ ಸೊತ್ತು ಭೂ ಪರಿವರ್ತನೆಯಾದ ಜಮೀನಿನ ಶುದ್ಧ ಕ್ರಯ ಪತ್ರ ಸಹಿ.

## : ಷೆಡ್ಯೂಲ್ :

ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ಹೊಸಪೇಟೆ ತಾಲ್ಲೂಕು, ಕಮಲಾಪುರ ಹೋಬಳಿ, ಕಮಲಾಪುರ ಗ್ರಾಮದ ರೀ ಸರ್ವೆ ನಂಬರ್ **901**, ವಿಸ್ತೀರ್ಣ: ಎಕರೆ–10, ಸೆಂಟ್ಸ್–54 (10–54) ವುಳ್ಳ ಜಮೀನಿನ ಪೈಕಿ ವಿಸ್ತೀರ್ಣ: ಎಕರೆ–ಏಳು, **ಸೆಂಟ್ಸ್–ಐವತ್ತು (7–50) ವುಳ್ಳ ಪೂರಾ ಜಮೀನನ್ನು ನಾನು ಕೃಷಿಯೇತರ ವಾಣಿಜ್ಯ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರ ಆದೇಶದ ಸಂಖ್ಯೆ.ಕಂ/ಭೂಪ.361/2014–15, ದಿನಾಂಕ: 26–08–2015 ರ ಆರ್ಡರ್ ಪ್ರಕಾರ ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ.** (ಈಗ ಹಾಲಿ ಭೂ ಮಾಪನ ಇಲಾಖೆಯವರಿಂದ ಪೋಡು ದರುಸ್ತಾದ ನಂತರ ಎಂ.ಆರ್.ಟಿ. 124/2015–16, ವಿಭಜನೆ, 5–12–2015, ಖಾತೆ ನಂ.1263ರ ಪ್ರಕಾರ ಇರುವ ಚಾಲ್ತಿ ರೀ ಸರ್ವೆ ನಂಬರ್ 901/1, ಇದರ ಪೂರಾ ವಿಸ್ತೀರ್ಣ: ಎಕರೆ–ಏಳು, ಸೆಂಟ್ಸ್–ಐವತ್ತು (7–50) ವುಳ್ಳದ್ದಾಗಿರುತ್ತದೆ.) ಈ ರೀತಿ ಭೂ ಪರಿವರ್ತನೆಯಾಗಿರುವ ಪೂರಾ ಜಮೀನಿಗೆ ಚಕ್ಕುಬಂದಿ:–

ಪಿ.ವಿ.ಸಂ.ಈ ಸಕಲಿನಲ್ಲಿ 10 ಪುಟಗಳಿದ್ದು ಇದು 9 ನೇ ಪುಟ

1819 / 20-21



ಉಪ ನೋಂದಣಾಧಿಕಾರಿಗಳು ಹೊಸಪೇಟೆ.



ಪೂರ್ವಕ್ಕೆ : ಹಳೇ ರೀ ಸರ್ವೆ ನಂ.901, ಚಾಲ್ತಿ ಹೊಸ ಸರ್ವೆ ರೀ ಸರ್ವೆ ನಂ.901/2 ವುಳ್ಳ ಜಮೀನು.

ಪಶ್ಚಿಮಕ್ಕೆ : ರೀ ಸರ್ವೆ ನಂ.965ರ ಜಮೀನು.

ಉತ್ತರಕ್ಕೆ : ರೀ ಸರ್ವೆ ನಂ.900 ಮತ್ತು 964 ರ ಜಮೀನು.

ದಕ್ಷಿಣಕ್ಕೆ : ರೀ ಸರ್ವೆ ನಂ.963, 964 ಮತ್ತು 965ರ ಜಮೀನುಗಳು.

ಈ ಮಧ್ಯದ ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಪೂರಾ ಜಮೀನನ್ನು ನಾನು ನಿಮಗೆ ಈ ಮೇಲ್ಕಂಡಂತೆ ಶುದ್ಧ ಕ್ರಯಕ್ಕೆ ಕೊಟ್ಟಿರುತ್ತೇನೆ.

**: ಸಾಕ್ಷಿಗಳು :**

1) B.G.SHAMARAO

2) (RAMESH.T)

ದಸ್ತಾವೇಜು ತಯಾರಿಸಿದವರು :-

(V.ALTAF)
Deed writer
Lc. No. 8/2012-13
Hospet

सत्यमेव जयते

# INDIA NON JUDICIAL

## Government of Karnataka

Rs. 20

**e-Stamp**

| | | |
|---|---|---|
| Certificate No. | : | IN-KA42178981885466T |
| Certificate Issued Date | : | 08-Feb-2021 01:23 PM |
| Account Reference | : | NONACC (FI)/ kaksfcl08/ HOSPET7/ KA-BY |
| Unique Doc. Reference | : | SUBIN-KAKAKSFCL0864823138636358T |
| Purchased by | : | MRUTHUNJAYA |
| Description of Document | : | Article 4 Affidavit |
| Description | : | AFFIDAVIT |
| Consideration Price (Rs.) | : | 0 (Zero) |
| First Party | : | MRUTHUNJAYA |
| Second Party | : | NA |
| Stamp Duty Paid By | : | MRUTHUNJAYA |
| Stamp Duty Amount(Rs.) | : | 20 (Twenty only) |

सत्यमेव जयते

For Kalpavruksha Vividhoddesha Souharda Sahakari Niyamitha, Hosapete

Authorised Signatory

Please write or type below this line

Statutory Alert:

1. The authenticity of this Stamp certificate should be verified at 'www.shcilestamp.com' or using e-Stamp Mobile App of Stock Holding. Any discrepancy in the details on this Certificate and as available on the website / Mobile App renders it invalid.
2. The onus of checking the legitimacy is on the users of the certificate.
3. In case of any discrepancy please inform the Competent Authority.

ಗುರುತಿಸುವವರು

ಈ ... 10 ... 5826/15-16
ದಸ್ತಾವೇಜು ... 6 ನೇ ಪುಟ
ಉಪ ನೋಂದಣಾಧಿಕಾರಿಗಳು
ಹೊಸಪೇಟೆ.

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ಸಹಿ |
|---|---|---|
| 1 | ಬಿ.ಜಿ. ಶಾಮರಾವ್ ತಂದೆ, ಲೇಟ್ ಬಿ.ಎಸ್. ಗುಂಡುರಾವ್<br>ಎಂ.ಸಿ.ಸಿ ಬಿ. ಬ್ಲಾಕ್ ದಾವಣಗೆರೆ | |
| 2 | ಎಸ್.ಎಂ. ರವಿಕಾಂತ ತಂದೆ, ಎಸ್.ಎಂ. ಪ್ರಮಥಯ್ಯ<br>ಚಿತ್ತವಾಡ್ಗಿ ಹೊಸಪೇಟೆ | |

ಉಪ ನೋಂದಣಾಧಿಕಾರಿಗಳು
ಸಬ್ ರಜಿಸ್ಟ್ರಾರ್
ಹೊಸಪೇಟೆ.

1 ನೇ ಪುಸ್ತಕದ ದಸ್ತಾವೇಜು
ನಂಬರ HSP-1-05826-2015-16 ಆಗಿ
ಸಿ.ಡಿ. ನಂಬರ HSPD110 ನೇ ದ್ದರಲ್ಲಿ
ದಿನಾಂಕ 18-01-2016 ರಂದು ನೋಂದಾಯಿಸಲಾಗಿದೆ

ಸಬ್ ರಜಿಸ್ಟ್ರಾರ್ (ಹಿರಿಯ ಉಪ ನೋಂದಣಾಧಿಕಾರಿಗಳು
ಹೊಸಪೇಟೆ.

ಉಪ ನೋಂದಣಾಧಿಕಾರಿಗಳ ಮೊಹರು
The Seal of the Sub-Registrar
HOSPET
ಹೊಸಪೇಟೆ

Designed and Developed by C-DAC, ACTS, Pune

ಉಪನೋಂದಣಾಧಿಕಾರಿಗಳ ಕಛೇರಿ, ಹೊಸಪೇಟೆ
ನಕಲು ಅರ್ಜಿ ಸಂಖ್ಯೆ 1819/20-21
ಮೂಲ ಪ್ರತಿಯ ಜೆರಾಕ್ಸ್ ನಕಲು ಪ್ರತಿ

ನಕಲು/ಶೋಧನೆ/ತಯಾರಿಸಿದವರು
ನಕಲು/ಶೋಧನೆ/ತಾಳೆ ಮಾಡಿದವರು
ಅರ್ಜಿ ಸ್ವೀಕರಿಸಿದ ದಿನಾಂಕ:
ಅರ್ಜಿ ವಿಲೇ ದಿನಾಂಕ: 08/02/2021

ಹಿರಿಯ ಉಪನೋಂದಣಾಧಿಕಾರಿಗಳು
ಹೊಸಪೇಟೆ

ಉಪ ನೋಂದಣಾಧಿಕಾರಿಗಳ ಮೊಹರು
The Seal of the Sub-Registrar
HOSPET
ಹೊಸಪೇಟೆ

ಉಪ ನೋಂದಣಾಧಿಕಾರಿಗಳು
ಹೊಸಪೇಟೆ

ಪ.ಪ.ಸಂ.ರ ನಕಲಿನಲ್ಲಿ 10 ಪುಟಗಳಿದ್ದು ಇದು 10 ನೇ ಪುಟ 1819